ಪತ್ರಿಕಾ ತುಣುಕುಗಳು
PAPER CLIPPINGS
ಇಲಾಖೆ / ವಿಷಯ: DEPARTMENT / SUBJECT:
ಪತ್ರಿಕೆಯ ಹೆಸರು : NAME OF THE NEWS PAPER : ಕನ್ನಡ ಪ್ರಭ
ದಿನಾಂಕ : DATE : 20/04/2019

**ನಿರಾಶಾದಾಯಕ** ಪ್ರತಿ ವಿಧಾನಸಭಾ ಕ್ಷೇತ್ರದಲ್ಲೂ ಅರ್ಧದಷ್ಟು ಮತದಾನ | ನಿರೀಕ್ಷೆ ಹುಸಿ ಮಾಡಿದ ಮತದಾರರು

# ನಗರದಲ್ಲಿ ಕಳೆದ ಬಾರಿಗಿಂತಲೂ ಕಡಿಮೆ ಮತದಾನ

20-4-19

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಲೋಕಸಭಾ ಚುನಾವಣೆಯ ಮಹಾಸಮರದಲ್ಲಿ ಸಿಲಿಕಾನ್ ಸಿಟಿಯ ಮತದಾರರು ಬಿರುಬಿಸಿಲನ್ನು ಲೆಕ್ಕಿಸದೆ ಹೆಚ್ಚಿನ ಪ್ರಮಾಣದಲ್ಲಿ ತಮ್ಮ ಹಕ್ಕು ಚಲಾಯಿಸುವ ಸಾಧ್ಯತೆ ಇದೆ ಎಂಬ ನಿರೀಕ್ಷೆಯು ಹುಸಿಯಾಗಿದ್ದು, ಕಳೆದ ಲೋಕಸಭಾ ಚುನಾವಣೆಗೆ ಹೋಲಿಸಿದರೆ ಈ ಬಾರಿಯ ಚುನಾವಣೆಯಲ್ಲಿ ಕಡಿಮೆಪ್ರಮಾಣದಲ್ಲಿ ಮತದಾನವಾಗಿದೆ.



ಬೆಂಗಳೂರು ಉತ್ತರ, ಬೆಂಗಳೂರು ದಕ್ಷಿಣ, ಬೆಂಗಳೂರು ಕೇಂದ್ರ ಹಾಗೂ ಬೆಂಗಳೂರು ಗ್ರಾಮಾಂತರದಲ್ಲಿ ಕಳೆದ ಬಾರಿಗಿಂತ ಕಡಿಮೆಯಾಗಿದೆ. ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಬರುವ ವಿಧಾನಸಭಾ ಕ್ಷೇತ್ರದಲ್ಲಿಯೂ ನಿರೀಕ್ಷಿತ ಮತದಾನವಾಗಿಲ್ಲ ಎಂಬುದು ಆಯೋಗದ ಅಂಕಿ-ಅಂಶದ ಮೂಲಕ ತಿಳಿದು ಬಂದಿದೆ. ಪ್ರತಿ ವಿಧಾನಸಭಾ ಕ್ಷೇತ್ರದಲ್ಲಿ ಜನಸಂಖ್ಯೆ ಇರುವ ಅರ್ಧದಷ್ಟು ಮತದಾನವಾಗಿರುವ ಕಾರಣ ಬೆಂಗಳೂರಲ್ಲಿ ಮತದಾನದ ಪ್ರಮಾಣ ಕಡಿಮೆಯಾಗಿದೆ ಎಂದು ಹೇಳಲಾಗಿದೆ.

ಸತತ ರಜೆ ಇದ್ದ ಕಾರಣ ಪ್ರವಾಸ ಕೈಗೊಳ್ಳದಂತೆ ಜಾಗೃತಿ ಮೂಡಿಸಿದರೂ ಬೆಂಗಳೂರಿನ ಬಹಳಷ್ಟು ಜನರು ಪ್ರವಾಸ ಕೈಗೊಂಡಿದ್ದರೆ; ಇನ್ನು ಕೆಲವರು ನಿರ್ಲಕ್ಷ್ಯ ತೋರಿ ಮತಗಟ್ಟೆಗೆ ಹೋಗಿಲ್ಲ. ಅಲ್ಲದೇ, ಮತಗಟ್ಟೆಗೆ ಹೋಗಿದ್ದರೂ ನಾನಾ ಕಾರಣಗಳಿಂದಲೂ ಮತದಾನದಿಂದ ವಂಚಿತರಾಗಿದ್ದಾರೆ. ಈ ಎಲ್ಲಾ ಕಾರಣಗಳಿಗಾಗಿ ಬೆಂಗಳೂರಿನಲ್ಲಿ ಮತದಾನ ಪ್ರಮಾಣ ಕಡಿಮೆಯಾಗಿದೆ ಎನ್ನಲಾಗಿದೆ.

ಬೆಂಗಳೂರು ಗ್ರಾಮಾಂತರ ಕ್ಷೇತ್ರದಲ್ಲಿ 2014ರಲ್ಲಿ ಶೇ.66.45ರಷ್ಟು ಮತದಾನವಾಗಿದ್ದರೆ, ಈ ಬಾರಿ ಶೇ.64.90ರಷ್ಟು ಮಾತ್ರ ಮತದಾನವಾಗಿದೆ. ಬೆಂಗಳೂರು ಉತ್ತರ ಕ್ಷೇತ್ರದಲ್ಲಿ 2014ರಲ್ಲಿ ಶೇ.56.53ರಷ್ಟು ಮತದಾನ ಪ್ರಮಾಣವಾಗಿದ್ದು, ಈ ಬಾರಿ ಶೇ.54.62ರಷ್ಟು ಆಗಿದೆ. ಬೆಂಗಳೂರು ದಕ್ಷಿಣದಲ್ಲಿ 2014ರಲ್ಲಿ ಶೇ.55.75ರಷ್ಟು ಆಗಿದ್ದ ಮತದಾನದ ಪ್ರಮಾಣವು ಈ ಬಾರಿ ಶೇ.53.48ರಷ್ಟು ಇಳಿಕೆಯಾಗಿದೆ. ಬೆಂಗಳೂರು ಕೇಂದ್ರ ಕ್ಷೇತ್ರದಲ್ಲಿ 2014ರಲ್ಲಿ ಶೇ.55.64 ರಷ್ಟು ಮತದಾನ ಆಗಿದ್ದು, ಈ ಸಲ ಶೇ.54.29ರಷ್ಟು ಮತದಾನವಾಗಿದೆ.

## ವಿಧಾನಸಭಾ ಕ್ಷೇತ್ರವಾರು ಮತದಾನ

| ಬೆಂಗಳೂರು ಗ್ರಾಮಾಂತರ | ಒಟ್ಟು ಶೇ.64.90 |
|---|---|
| ಕುಣಿಗಲ್ | 77.10 |
| ರಾಜರಾಜೇಶ್ವರಿ ನಗರ | 53.65 |
| ಬೆಂಗಳೂರು ದಕ್ಷಿಣ | 53.10 |
| ಆನೇಕಲ್ | 58.32 |
| ಮಾಗಡಿ | 78.14 |
| ರಾಮನಗರ | 77.32 |
| ಕನಕಪುರ | 82.22 |
| ಚನ್ನಪಟ್ಟಣ | 78.64 |

| ಬೆಂಗಳೂರು ಉತ್ತರ | ಒಟ್ಟು ಶೇ.54.62 |
|---|---|
| ಕೆ.ಆರ್.ಪುರ | 51.59 |
| ಬ್ಯಾಟರಾಯನಪುರ | 57.39 |
| ಯಶವಂತಪುರ | 58.43 |
| ದಾಸರಹಳ್ಳಿ | 49.21 |
| ಮಹಾಲಕ್ಷ್ಮಿ ಲೇಔಟ್ | 55.69 |
| ಮಲ್ಲೇಶ್ವರ | 57.96 |
| ಹೆಬ್ಬಾಳ | 54.28 |
| ಪುಲಕೇಶಿನಗರ | 54.02 |

| ಬೆಂಗಳೂರು ಕೇಂದ್ರ | ಒಟ್ಟು ಶೇ.54.29 |
|---|---|
| ಸರ್ವಜ್ಞನಗರ | 52.69 |
| ಸಿ.ವಿ.ರಾಮನ್‌ನಗರ | 49.53 |
| ಶಿವಾಜಿನಗರ | 56.53 |
| ಶಾಂತಿನಗರ | 53.48 |
| ಗಾಂಧಿನಗರ | 55.71 |
| ರಾಜಾಜಿನಗರ | 58.15 |
| ಚಾಮರಾಜಪೇಟೆ | 53.64 |
| ಮಹದೇವಪುರ | 55.45 |

| ಬೆಂಗಳೂರು ದಕ್ಷಿಣ | ಒಟ್ಟು ಶೇ.53.48 |
|---|---|
| ಗೋವಿಂದರಾಜನಗರ | 53.40 |
| ವಿಜಯನಗರ | 51.25 |
| ಚಿಕ್ಕಪೇಟೆ | 58.43 |
| ಬಸವನಗುಡಿ | 55.85 |
| ಪದ್ಮನಾಭನಗರ | 58.75 |
| ಬಿಟಿಎಂ ಲೇಔಟ್ | 51.27 |
| ಜಯನಗರ | 58.21 |
| ಬೊಮ್ಮನಹಳ್ಳಿ | 47.03 |